ಜನ ಪದೇ ಪದೇ,'ದುಡ್ಡಿಲ್ಲ ಕಾಸಿಲ್ಲ ಇರಾಬರಾ ಸೀಟೆಲ್ಲಾ ಇವರಿಗೆ ಬೇಕು' ಎನ್ನುತ್ತಾ ತಮ್ಮಗಳ ಅಸಮಾಧಾನಕರ ನೋಟ ಬೀರುತ್ತಿದ್ದರು.

ಬಸ್ ಇಳಿದ ನಾವು ರವೀಂದ್ರ ಕಲಾಕ್ಷೇತ್ರಕ್ಕೆ ನೇರ ಬಸ್ ಸಿಗದ ಕಾರಣ ಆಟೋದಲ್ಲಿ ಕುಳಿತೆವು. ಅವರು ಕೇಳಿದಷ್ಟು ದುಡ್ಡು ಕೊಡಲು ವಿಧಿಯಿಲ್ಲದೆ ಒಪ್ಪಿದೆವು. ನಮ್ಮ ಗುಂಪಿನಲ್ಲಿದ್ದ ಗೀತಕ್ಕ, 'ಈಗ ಹ್ಯಾಗೆ ನಡೀತಾ ಇದೆ ನಿಮ್ಮ ಆಟೋ ಬಿಜಿನೆಸ್ ಸರ್' ಎಂದರು. 'ಏನೋ ನಡೀತಾ ಇದೆ ಮೇಡಂ. ತುಂಬಾ ಕಷ್ಟ ಇದೆ ಆಟೋದಲ್ಲಿ ಜೀವನ ಮಾಡೋದು. ಹೆಂಗುಸ್ರ ಓಡಾಟ ಜಾಸ್ತಿಯಾಗ್ತಿದೆಯಲ್ಲ ನೀವು ಕಾಣಂಗೆ. ಕೆಲ್ಸ ಇದ್ದು ಇಪ್ಪತ್ತು ಜನ ಬಂದ್ರೆ ಕೆಲ್ಸ ಇಲ್ಲದೆ ಮೂವತ್ತು ಜನ ಬರ್‍ತಾರೆ ಮನೆಯಿಂದ ಹೊರಗಡೆ. ದುಡ್ಡಿಲ್ಲ ಕಾಸಿಲ್ಲ ಬಸ್ ಫ್ರೀ ಅಲ್ಲುವ್ರಾ' ಅಂದರು. ಅಮೌಂಟ್, ಫೋನ್ ಪೇ, ಗೂಗಲ್‌ಪೇ, ಕ್ಯಾಶ್ ಅಂಡ್ ಕ್ಯಾರಿ ಈ ಪದಗಳ ಸುತ್ತ ದುನಿಯಾ ಸುತ್ತಾಡುತ್ತಿರುವ ಹೊತ್ತಿನಲ್ಲಿ, ಹೀಗೆ ಇದ್ದಕ್ಕಿದ್ದಂತೆ ದಿಢೀರ್ ದುಡ್ಡಿಲ್ಲ ಕಾಸಿಲ್ಲ ಅಂತ ಮಾತಾಡಿದ್ದು ಸ್ವಲ್ಪ ಆಶ್ಚರ್ಯವಾಯಿತು ಅನ್ನುವುದಕ್ಕಿಂತ ತೀರಾ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿ ಮತ್ತು ಬೇಸರ ಇರಿಸುಮುರಿಸು ಇವೆಲ್ಲಾ ಇದ್ದಾಗ ಜನ ಇನ್ನೇನು ಮರೆತೇ ಬಿಟ್ಟಿದ್ದೇವೆ ಎಂದುಕೊಂಡಿದ್ದನ್ನು ಪುನಃ ನೆನಪು ಮಾಡಿಕೊಂಡು ಮಾತಾಡಿ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಾರೆ ಅನ್ನಿಸಿತು. ಯಾವುದೇ ಪದ ಬಳಕೆ ಅಷ್ಟು ಸುಲಭವಾಗಿ ಮಾನವ ಸಮುದಾಯವನ್ನು ಬಿಟ್ಟು ಹೋಗುವುದಿಲ್ಲ ಎಂಬುವುದು ನನಗೀಗ ಗ್ಯಾರಂಟಿಯಾಯಿತು.

ಅಂದ ಹಾಗೆ ದುಡ್ಡು ಎಂದರೆ ಹಣ ಎಂದರ್ಥ. ಅಜ್ಜಿ, ಮುತ್ತಜ್ಜಿಯರ ಕಾಲಕ್ಕೆ ಆಣೆಯ ಮೂರನೇ ಒಂದು ಭಾಗವನ್ನು ದುಡ್ಡು ಎಂದು ಕರೆದರು. ದೊಡ್ಡ ಮೊತ್ತ ಎಂಬರ್ಥದಲ್ಲಿ. 'ಎರಡು ಆಣೆ ತಗಂದು ಗೋಣಿಬೀಡು ಸಂತೆಗೆ ಹೋದ್ರೆ ಮನಿ ತುಂಬಾ ಸಾಮಾನು' ಎನ್ನುತ್ತಿದ್ದ ಕಾಲಮಾನ. ನಂತರ ದಾಸರ ಕಾಲದಲ್ಲಿ ಇದನ್ನು ರೊಕ್ಕ-ದುಗ್ಗಾಣಿ ಅಂದರು. ಕಾಸು ಎಂದರೂ ಹಣ ಅಂತಾನೆ ಅರ್ಥವಾದರೂ ಪಾವಲಿ, ನಾಣ್ಯ, ರೂಪಾಯಿ ಧನ ಕಾಂಚಾಣ ಎಂಬರ್ಥಗಳಿವೆ. ಅವತ್ತಿನ ಕಾಲಕ್ಕೆ ತಾಮ್ರದ ಸಣ್ಣ ಅಥವಾ ಚಿಕ್ಕ ನಾಣ್ಯಕ್ಕೆ ಕಾಸು ಎನ್ನುತ್ತಿದ್ದರಂತೆ. ಈ ಕಾಸು ಮುಂದೊಂದು ದಿನ ಚಿನ್ನದ ರೂಪ ತಾಳಿ ಹೆಂಗಸರ ಕತ್ತಿಗೆ ಕಾಸಿನ ಸರವಾಯಿತು. ಸ್ವಲ್ಪ ಸಮಯದ ನಂತರ ಚಿನ್ನದ ಸಣ್ಣಸಣ್ಣ ತುಂಡುಗಳನ್ನು ಪೀಸು ಎಂದು ಕರೆದು ಕಾಸಿನ ಜೊತೆ ಪೋಣಿಸಿ ಮದುವೆ ಹುಡುಗಿಗೆ ಕೊಡುತ್ತಿದ್ದರು. ಇದನ್ನು ಕಾಸುಪೀಸಿನ ಸರ ಎನ್ನುತ್ತಾರೆ. ಅನುಕೂಲಸ್ಥರ ಮನೆಯ ಹೆಂಗಸರು ಕಾಸುಪೀಸು ನಡುನಡುವೆ ಚಿನ್ನದ ಗುಂಡು ಸೇರಿಸಿ ಮಾಡಿದ ಸರ ಹಾಕಿಕೊಂಡು ಬಹಳ ಸುಂದರವಾಗಿ ಕಾಣುತ್ತಿದ್ದರು. 'ಎಷ್ಟು ಕಾಸು ತಂದ ಎಷ್ಟು ಪೀಸು ತಂದ' ಎನ್ನುವುದರ ಮೇಲೆ ವರನ ಗೌರವ ಹೆಚ್ಚು, ಇಲ್ಲ ಕಡಿಮೆಯಾಗುತ್ತಿತ್ತು. ದುಗ್ಗಾಣಿ ಅಥವಾ ಕಾಸು ದುಗ್ಗಾಣಿ ಎಂದರೆ ಎರಡು ಕಾಸು. ಮೂರನೇ ಕಾಸು ಅಂತ ಇರುವುದಿಲ್ಲ. ಏಕೆಂದರೆ ಮೂರು ಇರುವುದೇ ಬಯ್ಯುವುದಕ್ಕೆ. ನಾಲ್ಕುಕಾಸು ಎನ್ನುವುದು ಮುಂದುವರಿದ ಸಂಪಾದನೆ. ಅಂದರೆ ಪಾಪ ಒಳ್ಳೆ ಹುಡುಗ ಕಷ್ಟಪಟ್ಟು ಓದಿ ಬರ್‍ದು ನಾಲ್ಕು ಕಾಸು ಸಂಪಾದನೆ ಮಾಡಿ ನಾಕು ಜನ ಮೆಚ್ಚಂಗೆ ಇದಾನೆ ಎನ್ನುವಾಗ ಬಳಸುವಂತದ್ದು.

ಬಹಳ ವರ್ಷಗಳ ಹಿಂದೆ ಅವಿಭಕ್ತ ಕುಟುಂಬ ಜೀವನ ಕ್ರಮದಲ್ಲಿ ವಸ್ತುಗಳ ಪರಸ್ಪರ ವಿನಿಮಯ ಇದ್ದದ್ದರಿಂದ ದುಡ್ಡುಕಾಸು ಪ್ರಮುಖ ಪಾತ್ರ ವಹಿಸಲಿಲ್ಲ. ಕಾಲ ಬದಲಾಗಿ ಜನಸಂಖ್ಯೆ ಹೆಚ್ಚಿ ಕೈಗಾರಿಕೀಕರಣ ನಗರೀಕರಣ ಶಿಕ್ಷಣ ವಲಸೆ ಜಾಗತೀಕರಣಗಳು,ದುಡ್ಡೇ ದೊಡ್ಡಪ್ಪ ದುಡ್ಡು ಇದ್ದರೆ ಏನು ಬೇಕಾದ್ರೂ ಮಾಡಬಹುದು, ದುಡ್ಡಿಲ್ಲದವರು ಮನುಷ್ಯರೇ ಅಲ್ಲ ಎಂಬ ತೀರ್ಮಾನಕ್ಕೆ ಬಂದು ನಿಂತಂತೆ ಭಾಸವಾಗುತ್ತದೆ. ದುಡ್ಡಿಗಾಗಿ ಜಗಳ ಗಲಾಟೆ ಮನಸ್ತಾಪ ಕಳ್ಳತನ ಒಂದು ಎರಡಲ್ಲ. ರಾಷ್ಟ್ರಕವಿ ಕುವೆಂಪು ಅವರ ಮನೆ ಕುಪ್ಪಳಿಗೆ ಹೋದಾಗ ಮಹಡಿ ಮೇಲೆ ಗೋಡೆಯ ಒಂದು ಕಡೆ 'ದುಡ್ಡಿದ್ದರೆ ಮಾತ್ರ ನಗರದ ಬದುಕು. ದುಡ್ಡಿಲ್ಲದಿದ್ದರೂ ಬದುಕಬಹುದು ಹಳ್ಳಿಯಲ್ಲಿ. ಹಳ್ಳಿ ದುಡ್ಡಿಲ್ಲದೆ ಬದುಕುವುದನ್ನು ಕಲಿಸುತ್ತದೆ' ಎಂಬ ಸಾಲುಗಳನ್ನು ಓದಿ ರೋಮಾಂಚನಗೊಂಡ ಬೆನ್ನಲ್ಲೇ ನಾಕುದಿನ ಆ ಸಾಲುಗಳನ್ನು ನೆನೆನೆನೆದು